# ಶ್ರೀಮಾತೆಯವರ ಸ್ಮೃತಿಕಥೆ*

ಇಂಗ್ಲಿಷ್ ಮೂಲ : **ಸೋದರಿ ಸುನಂದಾದೇವಿ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಮದ್ರಾಸಿನ ಶ್ರೀರಾಮಕೃಷ್ಣ ಮಠದ ಮೊದಲ ಅಧ್ಯಕ್ಷರಾದ ಸ್ವಾಮಿ ರಾಮಕೃಷ್ಣಾನಂದಜಿ ಮಹಾರಾಜ್ ಅವರು ದಕ್ಷಿಣ ಭಾರತದಲ್ಲಿ ಶ್ರೀಗುರುಮಹಾರಾಜರ ಕಾರ್ಯವನ್ನು ಆರಂಭಿಸಲು ಸ್ವಾಮಿ ವಿವೇಕಾನಂದರಿಂದ ಕಳುಹಿಸಲ್ಪಟ್ಟವರು. ಆ ಕಾರ್ಯದಲ್ಲಿ ಅವರು ಮಾಡಿದ ಕಾರ್ಯ ಅಸಾಧಾರಣವಾದದು. ಅವರು ೧೯೧೧ರ ಫೆಬ್ರವರಿ ೧ ರಂದು ಡಾ.ಪಿ.ವೆಂಕಟರಂಗಂ (ಲೌಕಿಕವಾಗಿ ನನ್ನ ತಂದೆ; ಅವರು ಮೈಸೂರು ಪ್ರಾಂತದಲ್ಲಿ ರಾಮಕೃಷ್ಣ ಭಾವಧಾರೆ ಆರಂಭವಾಗುವುದರಲ್ಲಿ ಮಹತ್ವದ ಪಾತ್ರ ವಹಿಸಿದವರೂ, ಬಳಿಕ ಅದರ ಆಧಾರಸ್ತಂಭವಾಗಿ ನಿಂತವರೂ ಆಗಿದ್ದರು) ಅವರಿಗೆ ಪತ್ರ ಬರೆದು, ಸ್ವಯಂ ಜಗನ್ಮಾತೆಯಾದ ಶ್ರೀಶಾರದಾದೇವಿಯವರು ಬೆಂಗಳೂರಿಗೆ ಭೇಟಿ ನೀಡಲು ಸಮ್ಮತಿಸಿರುವುದಾಗಿ ತಿಳಿಸಿದರು. ಅವರಿಗೆ ಹಾಗೂ ಅವರೊಂದಿಗೆ ಬರಲಿರುವ ಹತ್ತುಮಂದಿ ಬಳಗದವರಿಗೆ ಅಲ್ಲಿ ತಂಗುವ ವ್ಯವಸ್ಥೆಯನ್ನು ಮಾಡಬೇಕೆಂದೂ ಪತ್ರದಲ್ಲಿ ಅವರು ತಿಳಿಸಿದ್ದರು. ೧೯೧೧ರ ಮಾರ್ಚ್ ತಿಂಗಳಲ್ಲಿ ಶ್ರೀಮಾತೆಯವರು ಅಲ್ಲಿಗೆ ಬಂದು, ಬಸವನಗುಡಿಯಲ್ಲಿರುವ ಶ್ರೀರಾಮಕೃಷ್ಣ ಆಶ್ರಮದ ಮಂದಿರದಲ್ಲಿ ತಂಗಿದ್ದರು. ನನಗೆ ನೆನಪಿದೆ, ಶ್ರೀಮಾತೆಯವರು ಬೆಂಗಳೂರಿಗೆ ಶುಕ್ರವಾರ ಬಂದಿದ್ದರು ಹಾಗೂ ಸೋಮವಾರ ಹೊರಟಿದ್ದರು. ಅವರು ಅಲ್ಲಿದ್ದಾಗ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದು, ಅವರ ಆಶೀರ್ವಾದವನ್ನು ಪಡೆದಿದ್ದರು. ಡಾ. ಪಿ.ವೆಂಕಟರಂಗಂ ಅವರು ತಮ್ಮ ಪತ್ನಿಯನ್ನು ಒಂದು ಪತ್ರದೊಂದಿಗೆ ಆಶ್ರಮದ ಅಧ್ಯಕ್ಷರ ಬಳಿಗೆ ಕಳುಹಿಸಿ, ಆಕೆಗೆ ಶ್ರೀಮಾತೆಯವರ ದರ್ಶನ ಮಾಡಲು ಅನುಮತಿ ನೀಡಬೇಕೆಂದು ವಿನಂತಿಸಿಕೊಂಡಿದ್ದರು. ನನ್ನ ತಾಯಿ ಹಾಗೂ ಶ್ರೀಮಾತೆಯವರ ನಡುವೆ ನಡೆದ ಮಾತುಕತೆ ನನಗೆ ಚೆನ್ನಾಗಿ ನೆನಪಿದೆ. ನನ್ನ ತಾಯಿಗೆ ಬಂಗಾಳಿ ಬರುತ್ತಿರಲಿಲ್ಲ ; ಶ್ರೀಮಾತೆಯವರಿಗೆ ತಮಿಳು ಬರುತ್ತಿರಲಿಲ್ಲ. ಆದರೂ ಅವರಿಬ್ಬರ ನಡುವೆ ದೀರ್ಘಕಾಲ ಸಂಭಾಷಣೆ ನಡೆಯಿತು. ಆಗಾಗ ನಗುತ್ತಿದ್ದರು ಕೂಡ. ಅವರ ಸಂಭಾಷಣೆ ಹೇಗೆ ನಡೆದಿತ್ತೆಂದರೆ, ಅವರಿಬ್ಬರೂ ಪರಸ್ಪರ ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಿದ್ದರು ಎಂಬುದು ಸ್ಪಷ್ಟವಾಗಿತ್ತು. ಅವರ ನಡುವೆ ಭಾಷೆ ಒಂದು ಅಡಚಣೆಯಾಗಿರಲಿಲ್ಲ.



ಒಂದು ಬಾರಿ ಹಾಗೆ ಮಾತುಕತೆ ನಡೆಯುತ್ತಿದ್ದಾಗ ಒಂದು ಸಲ ನನ್ನ ತಾಯಿ ಹಾಗೂ ತಂದೆ, ಶ್ರೀಮಾತೆಯವರ ಸೇವೆಗಾಗಿ ನನ್ನನ್ನು ಹಾಗೂ ನನ್ನ ಅಕ್ಕನನ್ನು ನಿಯೋಜಿಸಲು ಕೇಳಿಕೊಂಡರು. ಅದಕ್ಕೆ ಶ್ರೀಮಾತೆಯವರು ಉತ್ತರಿಸಿದ್ದೇನೆಂದರೆ, ನಾವಿಬ್ಬರೂ ಇನ್ನೂ ಚಿಕ್ಕವರು; ನಾವು ದೊಡ್ಡವರಾದಾಗ ಅವರ ಬಳಿಗೆ ಹೋಗಬಹುದು ಎಂಬುದಾಗಿ. ಆಗ ನನಗೆ ೧೩ ಅಥವಾ ೧೪ ವರ್ಷ ವಯಸ್ಸು. ೧೯೧೭ರ ಅಕ್ಟೋಬರ್ ೧೩ ರಂದು ನಾನು ಮತ್ತು ನನ್ನ ಎರಡನೇ ಅಕ್ಕ ಶ್ರೀಮಾತೆಯವರ ಸೇವೆಗಾಗಿ ಹೊರಟಿದ್ದೆವು. ನನ್ನ ಅತ್ತೆಯ ಮಗಳು, ಹಾಗೂ ದಿವಂಗತ ಶ್ರೀ ಎಂ. ರಾಜಗೋಪಾಲ ನಾಯ್ಡು ಅವರು ನಮ್ಮ ಜೊತೆಯಲ್ಲಿದ್ದರು. ನಾವು ಕಲ್ಕತ್ತೆಗೆ ಬಂದಿಳಿದಾಗ ನಮಗೆ ನಿರಾಸೆ ಕಾದಿತ್ತು: ಹವಾ ಬದಲಾವಣೆಗಾಗಿ ಶ್ರೀಮಾತೆ ಜಯರಾಮಬಾಟಿಗೆ ಹೋಗಿದ್ದರು. ನಮಗೆ ಅದೊಂದು ಆಘಾತವಾಗಿತ್ತು.

ಇದಕ್ಕೆ ಸಂಬಂಧಿಸಿದಂತೆ ದೂರದ ಪ್ರದೇಶದಲ್ಲಿ ಮತ್ತು ಹೊಸ ಪರಿಸರದಲ್ಲಿ ನಮಗಾದ ಅನುಭವವನ್ನು ವಿವರಿಸುವುದು ಪ್ರಸ್ತುತವಾದೀತು. ನಮಗೆ ಸ್ಥಳೀಯ ಭಾಷೆ ಗೊತ್ತಿರಲಿಲ್ಲ. ನಾವು ರೈಲ್ವೇ ನಿಲ್ದಾಣದಿಂದ ನೇರವಾಗಿ 'ಉದ್ಬೋಧನ'ಕ್ಕೆ ಹೋಗಿ

* ರಾಮಕೃಷ್ಣ ಮಹಾಸಂಘದ ಆಂಗ್ಲ ಮಾಸಪತ್ರಿಕೆ 'ವೇದಾಂತ ಕೇಸರಿ'ಯ ೧೯೭೩ರ ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾದ 'Reminisences of Sri Sarada Devi'ಎಂಬ ಲೇಖನದ ಅನುವಾದವಿದು. ಇದರ ಬಂಗಾಳಿ ಅನುವಾದ '**ಶ್ರೀ ಶ್ರೀ ಮಾಯೇರ್ ಪದಪ್ರಾಂತೇ**' ಗ್ರಂಥದ ಮೊದಲನೆಯ ಸಂಪುಟದಲ್ಲಿ ಸೇರ್ಪಡೆಗೊಂಡಿದೆ. *(-ಅನು.)*

ತಲುಪುವಾಗ ಮಧ್ಯಾಹ್ನವಾಗಿತ್ತು. ನಾವು ಮೊದಲು ಭೇಟಿಯಾದುದು ಸ್ವಾಮಿ ಶಾರದಾನಂದರನ್ನು. ನಾವು ಕಲ್ಕತ್ತೆಯಲ್ಲಿ ಇದ್ದಷ್ಟು ದಿನವೂ ಅವರೇ ನಮ್ಮ ಪೋಷಕರಾಗಿದ್ದರು. ಎರಡನೇ ದಿನ ನಾವು ಬೇಲೂರು ಮಠಕ್ಕೆ ಹೋದೆವು. ನಾವು ಅಲ್ಲಿಗೆ ಹೋದಾಗ ಸ್ವಾಮಿ ಬ್ರಹ್ಮಾನಂದರು ಬೇಲೂರು ಮಠದಲ್ಲಿರಲಿಲ್ಲ; ಬದಲಾಗಿ ನಾವು ಸ್ವಾಮಿ ಶಿವಾನಂದಜಿ ಮಹಾರಾಜರನ್ನು ಭೇಟಿಯಾದೆವು. ನಮ್ಮ ಹೊಸ ಜೀವನಕ್ಕೆ ಅಗತ್ಯವಾದ ಅನೇಕ ಸಲಹೆ, ಪ್ರೋತ್ಸಾಹಗಳನ್ನು ಅವರು ನಮಗೆ ನೀಡಿದರು. ಇಂಗ್ಲಿಷ್ ಬಿಟ್ಟರೆ ಬೇರೆ ಯಾವ ಭಾಷೆಯಲ್ಲೂ ಅಲ್ಲಿ ನಮಗೆ ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ ಎಂಬುದನ್ನಿಲ್ಲಿ ಹೇಳಬೇಕಾಗಿದೆ. ನಮಗೆ ಅಪರಿಚಿತ ಭಾವವನ್ನು ಹೋಗಲಾಡಿಸಲು, ಹಾಗೂ ನಮ್ಮಲ್ಲಿ ಊರಿನಿಂದ ದೂರವಾದ ಬೇಸರವನ್ನು ನಿವಾರಿಸಲು ಸೋದರಿ ಸುಧೀರಾ ಬೋಸ್ ಸಂಜೆ ಹೊತ್ತು ನಮ್ಮೊಂದಿಗೆ ಕಳೆಯುತ್ತಿದ್ದರು. ಅವರು ನಮಗೆ ತುಂಬಾ ಹುರುಪು ತುಂಬಿದರು. ಅವರು ಸೋದರಿ ನಿವೇದಿತಾ ಶಾಲೆ ಹಾಗೂ 'ಶ್ರೀ ಶಾರದಾ ಮಾತೃಮಂದಿರ'ದ ಮುಖ್ಯಸ್ಥರಾಗಿದ್ದರು. ಅವರಿಗೆ ಇಂಗ್ಲಿಷ್ ಬರುತ್ತಿತ್ತು. ನಮಗೆ ಬಂಗಾಳಿ ಭಾಷೆ ಬರದಿದ್ದುದರಿಂದ, ನಾವು ಅಲ್ಲಿನ ಮಕ್ಕಳಿಗೆ ನೇರ ವಿಧಾನದಿಂದ ಇಂಗ್ಲಿಷ್ ಕಲಿಸಲು ನಿಯೋಜಿತರಾದೆವು. ಎರಡು-ಮೂರು ತಿಂಗಳಲ್ಲಿ ನಾವು ಬಂಗಾಳಿ ಕಲಿತೆವು. ಇನ್ನು ಮುಂದೆ ನಮಗೆ ಭಾಷೆಯ ಸಮಸ್ಯೆ ಎದುರಾಗಲಿಲ್ಲ.

ನಾವು ಶ್ರೀಮಾತೆಯವರನ್ನು ಭೇಟಿಯಾಗಲು ಎರಡು-ಮೂರು ತಿಂಗಳು ಕಾಯಬೇಕಾಯಿತು. ಬಹುಶಃ ಅದು ವಿಧಿಯ ಇಚ್ಛೆಯಾಗಿದ್ದಿರಬೇಕು. ಮೊದಲೇ ನಾವು ಅವರನ್ನು ಭೇಟಿಯಾಗಿದ್ದರೆ, ನಾವು ಮಾತುಕತೆ ನಡೆಸುವಾಗ ಒಬ್ಬರು ಸಹಾಯಕರ (ದುಭಾಷಿ) ಅಗತ್ಯವಿರುತ್ತಿತ್ತು; ಆಗ ನಮ್ಮ ಸಂಭಾಷಣೆ ಔಪಚಾರಿಕವಾಗುತ್ತಿತ್ತು. ನಾವು ಕಲ್ಕತ್ತೆಗೆ ಬರುವುದಕ್ಕೂ, ಶ್ರೀಮಾತೆಯವರು ಜಯರಾಮಬಾಟಿಯಿಂದ ಹಿಂದಿರುಗಿ ಬಂದಾಗ ಅವರನ್ನು ಭೇಟಿಯಾಗುವುದಕ್ಕೂ ನಡುವೆ ಇದ್ದ ಕಾಲಾವಧಿ ನಾವು ಬಂಗಾಳಿಯನ್ನು ಕಲಿಯಲು ಸಾಕಾಗಿತ್ತು. ನಾವು ಅವರನ್ನು ಭೇಟಿಯಾದಾಗ ಅವರು ಮೊದಲು ಆಡಿದ ಮಾತೇ ಹೀಗಿತ್ತು: ''ಮಕ್ಕಳೆ, ನಾನು ನಿಮಗಾಗಿ ಜಯರಾಮಬಾಟಿಯಲ್ಲಿ ಕಾಯುತ್ತಿದ್ದೆ. ನೀವು ಬರಲಿಲ್ಲ, ಅದಕ್ಕಾಗಿ ನಾನೇ ನಿಮ್ಮ ಬಳಿಗೆ ಬಂದೆ.'' ಅವರ ಈ ಪ್ರೀತಿ ತುಂಬಿದ ಮಾತೃವಾಣಿಯನ್ನು ಕೇಳಿದಾಗ ನಮಗೆ ಪುಳಕವುಂಟಾಯಿತು; ಅದರೊಂದಿಗೆ ಇನ್ನೂ ನಮ್ಮಲ್ಲಿ ಉಳಿದಿದ್ದ ಅಪರಿಚಿತತೆ ಇಲ್ಲವಾಯಿತು.

ಉದ್ಬೋಧನವು 'ಶ್ರೀ ಮಾತೃ ಮಂದಿರ'ದಿಂದ ಕಾಲುನಡಿಗೆಯಿಂದ ಹೋಗಬಹುದಾದಷ್ಟು ಹತ್ತಿರದಲ್ಲೇ ಇದ್ದುದರಿಂದ ನಾವು ಆಗಾಗ ಶ್ರೀಮಾತೆಯವರನ್ನು ನೋಡಲು ಮಂದಿರದ ಇತರ ಸದಸ್ಯೆಯರೊಂದಿಗೆ ಹೋಗುತ್ತಿದ್ದೆವು. ಕೆಲವೊಮ್ಮೆ, ಶ್ರೀಮಾತೆಯವರಿಗೆ ಯಾವುದಾದರೂ ದೈಹಿಕ ಸೇವೆ ಮಾಡಲು ಕೂಡ ನಾವು ಹೋಗುತ್ತಿದ್ದೆವು. ಬೆಳಿಗ್ಗೆ ೯ ಗಂಟೆಯ ಸುಮಾರಿಗೆ ಶ್ರೀಮಾತೆಯವರು ಸ್ನಾನ ಮಾಡುತ್ತಿದ್ದರು. ಅದಕ್ಕೆ ಮುನ್ನ ಅವರ ತಲೆಗೆ ಹಾಗೂ ದೇಹಕ್ಕೆ ಎಣ್ಣೆ ಹಚ್ಚಿಕೊಡಲು ಅಥವಾ ಮಾಲಿಶ್ ಮಾಡಲು ನನ್ನನ್ನು ಕರೆಯುತ್ತಿದ್ದರು. ಇದು ನನ್ನ ಸೌಭಾಗ್ಯವೆಂದೇ ಹೇಳಬೇಕು. ಈ ಬಚ್ಚಲು ಮನೆಯ ಕೆಲಸಗಳನ್ನು ಮಾಡುತ್ತಿದ್ದಾಗ ಅವರ ತಲೆಯಿಂದ ಅನೇಕ ಬಿಳಿ ಕೂದಲುಗಳು ಉದುರಿ ಹೋಗುತ್ತಿದ್ದವು. ಅದನ್ನು ಬಿಸಾಡಲು ನಾನು ಬಿಡುತ್ತಿರಲಿಲ್ಲ. ನಾನು ಅವುಗಳನ್ನು ಸಂಗ್ರಹಿಸಿ, ಸಣ್ಣ ಕಟ್ಟುಗಳನ್ನಾಗಿ ಮಾಡಿ, ನನ್ನ ಸೀರೆಯಲ್ಲಿ ಅಡಗಿಸಿಡುತ್ತಿದ್ದೆ. ಒಂದು ದಿನ ಶ್ರೀಮಾತೆಯವರು ಇದನ್ನು ನೋಡಿ ನಗುತ್ತ, ಇಲ್ಲಿಯವರೆಗೆ ಎಷ್ಟೋ ಕೂದಲುಗಳು ಬಿದ್ದುಹೋಗಿವೆ; ಅವನ್ನೆಲ್ಲ ಬಿಸಾಡಿ ಬಿಟ್ಟಿದ್ದಾರೆ. ನನಗೆ ಅವುಗಳನ್ನು ಸಂಗ್ರಹಿಸಲು ಇಷ್ಟೊಂದು ಆಸೆ ಎಂಬುದು ಗೊತ್ತಿದ್ದರೆ ಅವನ್ನೆಲ್ಲ ನನಗೇ ಕೊಟ್ಟು ಬಿಡುತ್ತಿದ್ದರು — ಎಂದರು.

ಒಂದು ದಿನ ಸಂಜೆ ೭ ಗಂಟೆಯ ಹೊತ್ತಿಗೆ ಶ್ರೀಮಾತೆಯವರ ಬಳಿಗೆ ಹೋಗಲು ನಮಗೆ ಕರೆ ಬಂತು. ಅವರ ಮುಂದೆ ನಾವು ತಮಿಳಿನಲ್ಲಿ ಮಾತನಾಡಬೇಕೆಂದು ಅವರೆಂದರು. ಕೆಲವು ತಮಿಳು ಹಾಡುಗಳನ್ನೂ ಹಾಡಬೇಕೆಂದು ಅವರು ಹೇಳಿದರು. ನಮ್ಮ ಮಾತುಗಳನ್ನು ಕೇಳಿ ಶ್ರೀಮಾತೆಯವರಿಗೆ ತುಂಬಾ ಆನಂದವಾಯಿತು. ಹಾಡನ್ನು ಕೇಳಿ ಅವರು ಸಂತೋಷದಿಂದ ನಕ್ಕರು.

ಇನ್ನೊಂದು ದಿನ ನಾವು ಅವರಿಂದ ಬೀಳ್ಕೊಂಡು ಹಿಂದಿರುಗುತ್ತಿದ್ದಾಗ, ಶ್ರೀಮಾತೆ ಬಾಗಿಲವರೆಗೂ ಬಂದು, ರಾಧುವಿಗಾಗಿ ದಕ್ಷಿಣ ಭಾರತದ 'ರಸಂ' ತಯಾರಿಸಿ ಕೊಡಬೇಕೆಂದು ಹೇಳಿದರು. ಅಂತೆಯೇ ನಾವು ರಸಂ ತಯಾರಿಸಿ, ಅದನ್ನು ಅವರಿಗೆ ಕಳುಹಿಸಿಕೊಟ್ಟೆವು. ಅದೇ ರೀತಿ ಅವರು ಮಾಡ ಬಯಸಿದ ಇನ್ನೊಂದು ಪದಾರ್ಥವೇ ದಕ್ಷಿಣ ಭಾರತದ ಅಕ್ಕಿ-ಹಪ್ಪಳ. ನಮ್ಮ ತಂದೆ ಅದನ್ನು ತಯಾರಿಸಿ, ಬೆಂಗಳೂರಿನಿಂದ ರೈಲ್ವೆ ಪಾರ್ಸಲ್ ಮುಲಕ ಕಳುಹಿಸಿಕೊಟ್ಟರು. ಅಯ್ಯೋ! ಶ್ರೀಮಾತೆಯವರು ಅದನ್ನು ತಿಂದು ಸಂತಸಪಡಬಹುದಾಗಿತ್ತು; ಆದರೆ ಅಲ್ಲಿನ ಸಾಂಪ್ರದಾಯಿಕ ಮಹಿಳೆಯವರು ಶ್ರೀಮಾತೆಯವರು ಅದನ್ನು ತಿನ್ನದಂತೆ ತಡೆದರು. ಕಾರಣ, ರೈಲ್ವೇ ಪಾರ್ಸಲ್ ಮೂಲಕ ಬಂದ ಆಹಾರವಾಗಿತ್ತಲ್ಲ ಅದು!

ಮೋಡ ಕವಿದಿದ್ದ ಒಂದು ದಿನ ನಾನು ಶ್ರೀಮಾತೆಯವರ ಆಶೀರ್ವಾದ ಪಡೆಯಲು 'ಉದ್ಬೋಧನ'ಕ್ಕೆ ಹೋಗಿದ್ದೆ. ಶ್ರೀಮಾತೆ ನನ್ನನ್ನು ಆತ್ಮೀಯವಾಗಿ ಬರಮಾಡಿಕೊಂಡರು. ನನ್ನ ಆರೋಗ್ಯದ ಬಗ್ಗೆ ವಿವರವಾಗಿ ವಿಚಾರಿಸಿದರು. ಆಗಾಗ ನಾನು ಹೊಟ್ಟೆ ನೋವಿನ ತೊಂದರೆಗೆ ಒಳಗಾಗುತ್ತಿದ್ದೆ. ಶ್ರೀಮಾತೆಯವರು ಮೋಡಗಳನ್ನು ನೋಡಿ, ಆಗ ಬೆಂಗಳೂರಿನ ಹವಾಮಾನದಂತೆ

ಇದ್ದುದನ್ನು ಗಮನಿಸಿ ಕೇಳಿದರು, ಬೆಂಗಳೂರು ಅಲ್ಲಿನ ಹಾಗೆ ಇದೆಯೇ ಎಂದು. ಬೆಂಗಳೂರನ್ನು ಅವರು ತುಂಬಾ ಇಷ್ಟ ಪಟ್ಟರು ಎಂದೂ ಅವರು ತಿಳಿಸಿದರು. ಅವರು ಆ ಪ್ರದೇಶದ ಜನರನ್ನು ಹೊಗಳುತ್ತ, ಅಲ್ಲಿನ ಜನರು ತುಂಬ ಭಕ್ತಿಯಿಂದ ಕೂಡಿದವರು ಎಂದರು. ೧೯೧೮ರಲ್ಲಿ ಮಾತೃಮಂದಿರದ ಬಾಲಕಿಯರನ್ನು ವಾರಣಾಸಿಗೆ ಯಾತ್ರೆಗೆ ಕರೆದುಕೊಂಡು ಹೋಗಿದ್ದರು, ಅವರೊಂದಿಗಿದ್ದ ನನಗೆ ಅಲ್ಲಿ ಹೊಟ್ಟೆನೋವು ಮರುಕಳಿಸಿತ್ತು. ಮರಳಿ ಬಂದ ಮೇಲೆ ನನಗೆ ಹೊಟ್ಟೆನೋವು ಉಂಟಾದ ವಿಷಯ ಶ್ರೀಮಾತೆಯವರಿಗೆ ತಿಳಿಯಿತು. ಯಾತ್ರೆ ಹೋಗಿದ್ದ ಹುಡುಗಿಯರಲ್ಲಿ ಒಬ್ಬಳು ಶ್ರೀಮಾತೆಯವರ ಬಳಿಗೆ ಆಶೀರ್ವಾದ ಪಡೆಯಲು ಹೋಗಿದ್ದಾಗ, ಅವರು ಅವಳ ಬಳಿ ನನ್ನ ಆರೋಗ್ಯದ ಬಗ್ಗೆ ವಿಚಾರಿಸಿದರು. ಮೂರು-ನಾಲ್ಕು ಕಿತ್ತಳೆ ಹಣ್ಣುಗಳನ್ನೂ ನನಗೆ ತಿನ್ನಲು ಕಳುಹಿಸಿಕೊಟ್ಟರು. ಎಂಥ ಮಾತೃಹೃದಯ!

೧೯೧೮ರ ಮಾರ್ಚ್ ತಿಂಗಳಲ್ಲಿ ಶ್ರೀಮಾತೆಯವರು ಜಯರಾಮಬಾಟಿಯಿಂದ ಮರಳಿ ಬಂದರು. ಅವರ ಮುಂದೆ ದೀಕ್ಷೆಯ ಬಗ್ಗೆ ವಿಚಾರಿಸಿದಾಗ, ಕೂಡಲೇ ಅವರು ಅದಕ್ಕೆ ಸಮ್ಮತಿ ನೀಡಿ, ಮರುದಿನವೇ ದೀಕ್ಷೆ ನೀಡುವುದಾಗಿ ತಿಳಿಸಿದರು. ಆದರೆ ಇನ್ನೊಬ್ಬಳು ಹುಡುಗಿ ಬಹಳ ಸಮಯದಿಂದ ದೀಕ್ಷೆಗಾಗಿ ಕಾಯುತ್ತಿದ್ದಳು; ಅವಳು ಮಾತೃಮಂದಿರದ ಸದಸ್ಯೆಯರೊಂದಿಗೆ ಖಾಸಿ ಬೆಟ್ಟಗಳಿಗೆ ಹೋಗಿದ್ದಳು. ಆದ್ದರಿಂದ ದೀಕ್ಷೆಯ ದಿನವನ್ನು ಮುಂದೂಡಲಾಯಿತು. ಆ ಪವಿತ್ರವಾದ, ಎಂದೂ ಮರೆಯಲಾಗದ ದಿನ ೧೯೧೮ರ ಜೂನ್ ತಿಂಗಳಲ್ಲಿ ಬಂತು; ಅದು ರಥಯಾತ್ರೆಯ ದಿನವಾಗಿತ್ತು.

ನನ್ನೊಂದಿಗೆ ಮಾತೃಮಂದಿರದ ಇನ್ನು ಮೂವರು ಕೂಡ ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದರು. ಗಂಗಾಸ್ನಾನ ಮಾಡಿ, ಹೊಸ ಬಟ್ಟೆಬರೆ ಧರಿಸಿ, ಬೆಳಿಗ್ಗೆ ಸುಮಾರು ೮ ಗಂಟೆಯ ಹೊತ್ತಿಗೆ 'ಉದ್ಬೋಧನ'ಕ್ಕೆ ಹೋದೆವು. ನಮ್ಮೊಂದಿಗೆ ಇನ್ನಿತರರೂ ದೀಕ್ಷೆ ಪಡೆದಿದ್ದರು. ಹತ್ತು ಗಂಟೆಯ ಒಳಗಾಗಿ ಎಲ್ಲರ ದೀಕ್ಷೆ ಮುಗಿದಿತ್ತು. ಶ್ರೀಮಾತೆಯವರು ದೀಕ್ಷಾರ್ಥಿಗಳ ಹೆಸರುಗಳನ್ನು ಕರೆದ ಕ್ರಮದಲ್ಲೇ ದೀಕ್ಷೆ ನೀಡಲಾಗಿತ್ತು. ದೀಕ್ಷೆಯಾದ ನಂತರ ಶ್ರೀಮಾತೆಯವರು ತಿಂಡಿ ಸ್ವೀಕರಿಸಿದರು. ಅವರ ಪ್ರಸಾದವನ್ನು ನಮಗೆಲ್ಲ ನೀಡಿದರು. ಪ್ರಸಾದ ಸ್ವೀಕರಿಸುವ ಮುನ್ನ ನಾವೆಲ್ಲರೂ ಶ್ರೀಮಾತೆಯವರ ಪವಿತ್ರ ಪಾದಕಮಲಗಳಿಗೆ ಪುಷ್ಪಗಳನ್ನು ಸಮರ್ಪಿಸಿ, ಅವರ ಆಶೀರ್ವಾದವನ್ನು ಪಡೆದುಕೊಂಡೆವು. ಅನಂತರ ನಾವು ಮಾತೃಮಂದಿರಕ್ಕೆ ಮರಳಿದೆವು. ಮಧ್ಯಾಹ್ನದ ಊಟಕ್ಕಾಗಿ ನಾವು ಮತ್ತೆ 'ಉದ್ಬೋಧನ'ಕ್ಕೆ ಹೋದೆವು.

ಒಂದು ದಿನ ನನ್ನ ಹೃದಯದಲ್ಲಿ ಒಂದು ಅಸಾಧಾರಣ ಬಯಕೆಯುಂಟಾಯಿತು. ಶ್ರೀಮಾತೆಯವರ ವಿಶೇಷ ಕೃಪೆಗೆ ನಾನು ಪಾತ್ರಳಾಗಬೇಕೆಂಬುದೇ ಆ ಬಯಕೆ. ಈ ಭಾವನೆಯೊಂದಿಗೆ ಒಂದು ದಿನ ಸಾಯಂಕಾಲ ಶ್ರೀಮಾತೆಯವರ ದರ್ಶನಕ್ಕಾಗಿ ಹೋದೆ. ಶ್ರೀಮಾತೆಯವರು ಅಲ್ಲಿ ನೆರೆದಿದ್ದ ಎಲ್ಲರಿಗೂ ಸಂದೇಶ ಸಿಹಿತಿಂಡಿಯನ್ನು ಹಂಚಿದರು. ನನ್ನ ಸರದಿ ಬಂದಾಗ, ಸಂದೇಶವು ಅವರ ಕೈಯಿಂದ ಜಾರಿ, ಅವರ ಪಾದಗಳ ಮೇಲೆ ಬಿತ್ತು. ತಮ್ಮ ಪವಿತ್ರವಾದ ಪಾದಗಳಿಂದ ಅದನ್ನು ತೆಗೆದುಕೊಂಡು, ನನಗೆ ಕೊಟ್ಟರು. ಇದೇ ಶ್ರೀಮಾತೆಯವರ ವಿಶೇಷ ಕೃಪೆಯಿಲ್ಲದಿದ್ದರೆ, ಬೇರೆ ಏನನ್ನೂ ನಾನು ಮನಸ್ಸಿನಲ್ಲಿ ಆಲೋಚಿಸಲಾರೆ. ಇನ್ನೊಂದು ದಿನ ನಾನು ಗಂಗಾಸ್ನಾನ ಮಾಡಿ, ಒದ್ದೆಯಾದ ಕೂದಲಿನೊಂದಿಗೆ ನೇರ ಅವರ ದರ್ಶನಕ್ಕಾಗಿ ಹೋಗಿದ್ದೆ. ಆಗಲೂ ಅವರ ಅದೇ ಬಗೆಯ ಮಾತೃಸ್ನೇಹವನ್ನು ನಾನು ಅನುಭವಿಸಿದೆ. ಕೂದಲು ಒಣಗಿಸದೆ ಹಾಗೇ ಇದ್ದರೆ ನೆಗಡಿಯಾಗುವುದು ಎಂದು ಪ್ರೀತಿಯಿಂದ ಹೇಳಿದ ಶ್ರೀಮಾತೆ, ನನ್ನ ಕೂದಲಿನ ಗಂಟನ್ನು ಅದು ಬೇಗನೆ ಒಣಗುವಂತೆ ಬಿಚ್ಚಿದರು. ಇನ್ನೊಂದು ದಿನ, ಸಂಪೂರ್ಣ ಆಧ್ಯಾತ್ಮಿಕ ಲಾಭವನ್ನು ಪಡೆಯಲು ತಿಂಡಿ ಮಾಡುವುದಕ್ಕೆ ಮೊದಲೇ ಶ್ರೀಮಾತೆಯವರ ದರ್ಶನ ಪಡೆಯಬೇಕೆಂಬ ಆಸೆ ನನಗುಂಟಾಯಿತು. ನನಗೆ ಆಶ್ಚರ್ಯ — ಶ್ರೀಮಾತೆ ನನ್ನಲ್ಲಿ ಕೇಳಿದ ಮೊದಲ ಪ್ರಶ್ನೆಯೇ, ನನ್ನ ತಿಂಡಿ ಆಗಿತ್ತೇ ಎಂಬುದಾಗಿ. ಅವರು ನನಗೆ ಸ್ವಲ್ಪ ಪ್ರಸಾದ ನೀಡಿ, ನಂತರ ನನ್ನೊಂದಿಗೆ ಮಾತನಾಡತೊಡಗಿದರು. ಒಂದು ದಿನ ಶ್ರೀಮಾತೆಯವರು ತಮ್ಮ ಒಂದು ಶಾಲನ್ನು ಅಂಚು ಹೊಲಿಯಲು ಕಳುಹಿಸಿಕೊಟ್ಟರು. ಅದು ಸಮುದ್ರ-ಹಸಿರು ಬಣ್ಣದ್ದಾಗಿತ್ತು. ಹೀಗೆ ಅಂಚು ಹೊಲಿಯುವಾಗ ಅದರ ತ್ರಿಕೋಣದ ಮಡಿಕೆಯಲ್ಲಿ ಹೆಚ್ಚಾಗಿ ಹೊರಬರುತ್ತಿತ್ತು. ಅದನ್ನು ಕತ್ತರಿಸಿ ಟ್ರಿಮ್ ಮಾಡಬೇಕಾಯಿತು. ಹೀಗೆ ಕತ್ತರಿಸಿದ ಅಂಚನ್ನು ಈಗಲೂ ಶ್ರೀಮಾತೆಯವರ ಆಶೀರ್ವಾದವೆಂದು ಸುರಕ್ಷಿತವಾಗಿ ಇಟ್ಟುಕೊಂಡಿದ್ದೇನೆ.

ನಾವು ನಮ್ಮ ಊರನ್ನು ಬಿಟ್ಟು ಎರಡು ವರ್ಷವಾಗಿತ್ತು. ಆದ್ದರಿಂದ ಸ್ವಾಮಿ ಶಾರದಾನಂದರು ಒಂದು ಬಾರಿ ಬದಲಾವಣೆಗಾಗಿ ಮನೆಗೆ ಹೋಗಿ ಬರಲು ತಿಳಿಸಿದರು. ಅದಕ್ಕಾಗಿ ಪ್ರಯಾಣದ ವ್ಯವಸ್ಥೆಯನ್ನೆಲ್ಲ ಮಾಡಲಾಯಿತು. ನಮಗೆ ಅಲ್ಲಿಂದ ಹೊರಡಲು ಮನಸ್ಸಿಲ್ಲದಿದ್ದರೂ, ಹಿರಿಯರ ಸಲಹೆಯನ್ನು ನಾವು ಮನ್ನಿಸಬೇಕಾಯಿತು. ಪ್ರಯಾಣದ ದಿನ ನಾವು ಶ್ರೀಮಾತೆಯವರ ಆಶೀರ್ವಾದ ಪಡೆಯಲು ಅವರ ಬಳಿಗೆ ಹೋದೆವು. ಅವರು ನಮ್ಮನ್ನು ಆಶೀರ್ವದಿಸಿದ್ದಲ್ಲದೆ, ಶ್ರೀಗುರು ಮಹಾರಾಜರ ನಿರ್ಮಾಲ್ಯದ ಹೂಗಳನ್ನು ನಮಗೆ ಕೊಟ್ಟು, ಬೇಗನೆ ಮರಳಿ ಬನ್ನಿ ಎಂದು ಹೇಳಿದರು. ಬೆಂಗಳೂರಿನಲ್ಲಿ ನಾವು ಇಪ್ಪತ್ತು ದಿನಗಳಷ್ಟೇ ಇದ್ದೆವು. ಅಷ್ಟರಲ್ಲಿ ಶ್ರೀಮಾತೆ ತೀವ್ರ ಅನಾರೋಗ್ಯ ಹೊಂದಿ, ಹಾಸಿಗೆ ಹಿಡಿದಿರುವುದಾಗಿ ಸುದ್ದಿ ಬಂತು. ಕೂಡಲೇ ನಾವು ಕಲ್ಕತ್ತೆಗೆ ಹೊರಟೆವು. ಹಿಂದಿರುಗಿ ಬಂದ ಕೂಡಲೇ ನಾವು ಶ್ರೀಮಾತೆಯವರ ದರ್ಶನ ಪಡೆಯಲು

ಹೋದೆವು. ಅವರು ಹಾಸಿಗೆಯಲ್ಲಿ ಮಲಗಿದ್ದರೂ, ಅವರ ಪ್ರಜ್ಞೆ ಚೆನ್ನಾಗಿ ಇತ್ತು. ನಮ್ಮ ಪ್ರದೇಶದಲ್ಲಿ ಎಲ್ಲವೂ ಹೇಗಿದೆ ಎಂದೆಲ್ಲ ಅವರು ಕಾಳಜಿಯಿಂದ ವಿಚಾರಿಸಿದರು.

ದಿನೇ ದಿನೇ ಶ್ರೀಮಾತೆಯವರ ಆರೋಗ್ಯ ಹದಗೆಡುತ್ತ ಹೋಯಿತು. ಅವರನ್ನು ನೋಡಿಕೊಳ್ಳಲು ಸೇವಕಿಯೊಬ್ಬಳು ಯವಾಗಲೂ ಅಲ್ಲಿ ಇರಬೇಕಾಯಿತು. ಪ್ರವ್ರಾಜಿಕಾ ಭಾರತೀ ಪ್ರಾಣಾ (ಸರಳಾದೇವಿ) ಸೇವೆ ಮಾಡುವುದರಲ್ಲಿ ವಿಶೇಷ ಪರಿಣತಳಾಗಿದ್ದಳು; ಅವಳು ಮಾತೃಮಂದಿರದಲ್ಲಿ ನಮ್ಮ ಕೋಣೆಯಲ್ಲೇ ಇರುತ್ತಿದ್ದಳು ಕೂಡ. ಅವಳು ಶ್ರೀಮಾತೆಯವರ ಸೇವಕಿಯಾಗಿದ್ದಳು. ರಾತ್ರಿ ಹೊತ್ತು ಶ್ರೀಮಾತೆಯವರ ಸೇವೆ ಮಾಡಲು ಹಾಗೂ ಅಲ್ಲಿ ಕಾವಲು ನಿಲ್ಲಲು ಮಾತೃಮಂದಿರದ ಹುಡುಗಿಯರನ್ನು ಸರದಿ ಪ್ರಕಾರ ನಿಯಮಿಸಲಾಗಿತ್ತು. ಬೆಳಿಗ್ಗೆ ೨ ರಿಂದ ೪ ರವರೆಗೆ ನನ್ನ ಸರದಿಯಾಗಿತ್ತು. ಶ್ರೀಮಾತೆಯವರು ಅವರ ಸೇವಕಿಯಾಗಿ ನೇಮಿಸಲ್ಪಟ್ಟವಳ ಹೆಸರೇನೆಂದು ನನ್ನನ್ನು ಕೇಳುತ್ತಿದ್ದರು. ಅವರ ದೇಹದ ಮೇಲೆ, ತಲೆಯಿಂದ ಕಾಲಿನವರೆಗೂ ಕೈಯಾಡಿಸುವಂತೆ ಅವರು ನನಗೆ ಹೇಳುತ್ತಿದ್ದರು. ಆಗ ನಾವು ತುಂಬಾ ಎಚ್ಚರದಿಂದಿರಬೇಕಿತ್ತು. ಸಣ್ಣ ಸದ್ದಾದರೂ, ಪಕ್ಕದ ಕೋಣೆಯಲ್ಲಿರುತ್ತಿದ್ದ ಸ್ವಾಮಿ ಶಾರದಾನಂದಜಿ ಮಹಾರಾಜ್ ಅಲ್ಲಿಗೆ ಬಂದು ಏನಾಯಿತು ಎಂದು ವಿಚಾರಿಸುತ್ತಿದ್ದರು. ಇಂಥ ಒಂದು ರಾತ್ರಿ ಶ್ರೀಮಾತೆಯವರಿಗೆ ತುಸು ಸನ್ನಿ ಹಿಡಿದಂತಾಗಿ, ತಾವು ಬೇಲೂರು ಮಠಕ್ಕೆ ಹೋಗುವುದಾಗಿಯೂ, ಇನ್ನೊಮ್ಮೆ ಬೆಂಗಳೂರಿಗೆ ಹೋಗುವುದಾಗಿಯೂ ಹೇಳಿದರು. ಅವರ ಆರೋಗ್ಯ ಸುಧಾರಿಸಿದ ನಂತರ ಆ ಸ್ಥಳಗಳಿಗೆಲ್ಲ ಹೋಗಬಹುದೆಂದು ಹೇಳಿ ಅವರನ್ನು ನಾನು ಸಂತೈಸಿದೆ. ಹೀಗೆ ಹೇಳಿದಾಗ ಅವರು ಶಾಂತರಾದರು. ಶ್ರೀಮಾತೆ ಮಲಗಿದ್ದಾಗ ಸೊಳ್ಳೆ ಪರದೆ ಹಾಕಿರುತ್ತಿತ್ತು; ಆದ್ದರಿಂದ ಅವರ ಸೇವೆ ಮಾಡುವಾಗ ನಾನು ಸೊಳ್ಳೆ ಪರದೆಯ ಒಳಗೆ ಹೋಗಿಬಿಡುತ್ತಿದ್ದೆ. ಅನೇಕ ಬಾರಿ ಅವರು ತಮ್ಮೊಂದಿಗೆ ಚಾಪೆಯಲ್ಲಿ ಮಲಗಿಕೊಳ್ಳಲು ನನಗೆ ಹೇಳುತ್ತಿದ್ದರು. (ಅವರಿಗೆ ತುಂಬಾ ಅನಾರೋಗ್ಯವುಂಟಾದಾಗ, ಅವರನ್ನು ಮಂಚದಿಂದ ಇಳಿಸಿ, ನೆಲದಲ್ಲಿ ಚಾಪೆಯ ಮೇಲೆ ಮಲಗಿಸಲಾಗಿತ್ತು.) ನನಗೆ ಇದೊಂದು ವಿಶೇಷ ಸೌಭಾಗ್ಯವಾಗಿತ್ತು ನಿಜ; ಆದರೆ ನಾನು ಯಾವಾಗಲೂ ಹಾಗೆ ಮಾಡಲು ಅಳುಕುತ್ತಿದ್ದೆ — ನನ್ನ ಹೃದಯ ಕಂಪಿಸುತ್ತಿತ್ತು. ಪ್ರವ್ರಾಜಿಕಾ ಭಾರತೀಪ್ರಾಣಾ ನನ್ನ ಕೋಣೆಯಲ್ಲೇ ವಾಸಿಸುತ್ತಿದ್ದುದು ನನ್ನ ಅದೃಷ್ಟವೆನ್ನಬೇಕು. ಅವಳು ಶ್ರೀಮಾತೆಯವರ ಸೇವೆ ಮಾಡುತ್ತಿದ್ದುದರಿಂದ ಅವಳಿಗೆ ಶ್ರೀಮಾತೆಯವರ ಉಗುರು ತೆಗೆಯುವ ಅವಕಾಶ ಒದಗಿ ಬಂದಿತ್ತು. ಶ್ರೀಮಾತೆಯವರಿಗೆ ಮಸಾಜ್ ಮಾಡುವ ಸಂದರ್ಭದಲ್ಲಿ ಅವರ ದೇಹದಿಂದ ಕಿತ್ತು ತೆಗೆದ ಚರ್ಮವನ್ನೂ ಆಕೆ ಸಂಗ್ರಹಿಸಿದ್ದಳು. ಆಕೆ ಸಂಗ್ರಹಿಸಿದ ಉಗುರು, ಕೂದಲು ಹಾಗೂ ಚರ್ಮ ಇವನ್ನು ನಾನು ಕೇಳಿಕೊಂಡಾಗ ನನಗೆ ಕೊಟ್ಟುಬಿಡುತ್ತಿದ್ದಳು. ಈ ಪವಿತ್ರ ಅವಶೇಷಗಳನ್ನು ಈಗ ಬೆಂಗಳೂರಿನ ಮಾತೃಮಂದಿರದಲ್ಲಿ ಪೂಜಿಸಲಾಗುತ್ತಿದೆ. ಒಂದು ಸಲ ಶ್ರೀಮಾತೆಯವರ ಸೇವೆ ಮಾಡುತ್ತಿದ್ದಾಗ, ಅವರ ಹಳೆಯ ಸೀರೆಯನ್ನು ಹರಿದು ತೇಪೆಗಳನ್ನು ಮಾಡಬೇಕಿತ್ತು. ನನಗೆ ಈ ಕೆಲಸವನ್ನು ಕೊಟ್ಟಿದ್ದರು. ಕೊನೆಗೆ ಒಂದೇ ಒಂದು ತೇಪೆ ಉಳಿದಿತ್ತು — ಸೀರೆಯ ಅಂಚಿನ ಭಾಗವದು. ಅದನ್ನು ನಾನು ಪವಿತ್ರ ಸ್ಮರಣಿಕೆಯಾಗಿ ಉಳಿಸಿಕೊಂಡೆ. ೧೯೧೧ ರಲ್ಲಿ ಶ್ರೀಮಾತೆಯವರು ಬೆಂಗಳೂರಿಗೆ ಭೇಟಿ ನೀಡಿದಾಗ ಅವರ ಪಾದ ಚಿಹ್ನೆಯನ್ನು ತೆಗೆಯಲಾಗಿತ್ತು; ಅದನ್ನೂ ಅಲ್ಲಿ ದೇವಾಲಯದಲ್ಲಿ ಇಡಲಾಗಿದೆ.

ಶ್ರೀಮಾತೆಯವರ ದೇಹಸ್ಥಿತಿ ಇನ್ನಷ್ಟು ಹದಗೆಡುತ್ತ ಬಂತು. ವೇಗವಾಗಿ ಅವರ ಆರೋಗ್ಯ ಕ್ಷೀಣಿಸುತ್ತಿತ್ತು. ಅವರ ಮಹಾಸಮಾಧಿಗೆ ಮೂರು ದಿನಗಳ ಮುನ್ನ, ನಮ್ಮನ್ನು ಅವರೊಂದಿಗೆ ಇರಲು ಬಿಡಲಿಲ್ಲ. ನಾವು ಅವರ ದರ್ಶನ ಮಾಡಿ ಮಾತೃಮಂದಿರಕ್ಕೆ ಹಿಂದಿರುಗುತ್ತಿದ್ದೆವು. ಕೊನೆಗೆ ಒಂದು ದಿನ ಬೆಳಿಗ್ಗೆ ನಸುಕಿನಲ್ಲೇ ಬಂದ ಗೋಲಾಪ್ ಮಾ ನನ್ನ ಕಿವಿಯಲ್ಲಿ ಉಸುರಿದರು, ಅನಿವಾರ್ಯವಾಗಿ ನಡೆಯಲೇಬೇಕಾದ ಘಟನೆ ನಡೆಯಿತು ಎಂಬುದಾಗಿ. ಬಳಿಕ ನಾವು ಶ್ರೀಮಾತೆಯವರು ಮಹಾಸಮಾಧಿಯಲ್ಲಿ ಶಾಂತವಾಗಿ ನೆಲೆಸಿದ್ದನ್ನು ಕಂಡೆವು. ಅವರ ಕಳೇಬರವನ್ನು ಬೇಲೂರು ಮಠಕ್ಕೆ ತೆಗೆದುಕೊಂಡು ಹೋದರು. ನಾವೂ ಬೇಲೂರು ಮಠಕ್ಕೆ ಹೋದೆವು. ಕಳೇಬರಕ್ಕೆ ಸ್ನಾನ ಮಾಡಿಸುವ ಕೆಲಸವನ್ನು ನಮಗೆ ಒಪ್ಪಿಸಿದರು. ಸ್ನಾನವಾದ ಬಳಿಕ ಅವರ ದೇಹವನ್ನು ಚಿತೆಯ ಮೇಲೆ ಇಟ್ಟು, ಅಗ್ನಿಸ್ಪರ್ಶ ಮಾಡಲಾಯಿತು. ಅವರ ಎಲ್ಲ 'ಪುತ್ರಿ'ಯರಿಗೂ ಚಿತೆಯ ಮೇಲೆ ತುಪ್ಪ ಹಾಗೂ ಇನ್ನಿತರ ವಸ್ತುಗಳನ್ನು ಎರೆಯುವ ಅವಕಾಶ ಲಭಿಸಿತ್ತು. ನಾನು ಚಿತೆಗೆ ತುಪ್ಪ ಇತ್ಯಾದಿಗಳನ್ನು ಹಾಕುವಾಗ, ಚಿತೆಯ ಜ್ವಾಲೆಗಳು ನನ್ನ ಕೈಯನ್ನು ಸುಟ್ಟವು. ಶ್ರೀಮಾತೆಯವರ ಈ ಕೊನೆಯ ಸ್ಪರ್ಶ ನನ್ನಲ್ಲಿ ಸವಿನೆನಪಾಗಿ ಬಹಳ ಕಾಲ ಉಳಿಯಿತು. ಅವರ ಎಲ್ಲ 'ಪುತ್ರಿ'ಯರೂ ಸೂತಕದ ದಿನಗಳಲ್ಲಿ ಉಪವಾಸ ಮಾಡಿದರು. ನಾವು ದಿನದಲ್ಲಿ ಒಂದೇ ಬಾರಿ ಹವಿಷ್ಯಾನ್ನ ತೆಗೆದುಕೊಳ್ಳುತ್ತಿದ್ದೆವು; ರಾತ್ರಿ ಹೊತ್ತು ಹಣ್ಣನ್ನು ಮಾತ್ರ ತಿನ್ನುತ್ತಿದ್ದೆವು. ಹೀಗೆ ಶ್ರೀಮಾತೆಯವರೊಂದಿಗೆ ಈ ಭೌತಿಕ ಪ್ರಪಂಚದಲ್ಲಿ ನನ್ನ ಸಂಪರ್ಕವು ಕೊನೆಗೊಂಡಿತು.

ನಾನು ಶ್ರೀಮಾತೆಯವರನ್ನು ಪ್ರತಿದಿನ ಭೇಟಿಯಾಗುತ್ತಿದ್ದಾಗ, ಅವರು ಒಂದು ದಿನ ಪ್ರೀತಿಯಿಂದ ನನಗೆ ಹೇಳಿದ್ದರು, ಒಂದು ಬಾರಿಯಾದರೂ ಜಯರಾಮಬಾಟಿಗೆ ಹೋಗಿ ಬರುವಂತೆ. ಶ್ರೀಮಾತೆಯವರ ಈ ಬಯಕೆ ಪೂರ್ಣಗೊಂಡುದು ೧೯೪೧ರಲ್ಲಿ. ಅಲ್ಲಿ ನಾನು ಇಪ್ಪತ್ತು ದಿನಗಳನ್ನು ಅತ್ಯಂತ ಆನಂದದಿಂದ ಕಳೆದೆ. ❖